ನೋಡಿಕೊಳ್ಳುವುದೊಂದು ರಗಳೆ ನಮಗೆ. ಇವನೋ ಊಟತಿಂಡಿ ಸಹ ಮಾಡು ಹೇಳಿದರೆ ಮಾಡತಾನೆ, ಸ್ವಂತ ಬುದ್ಧಿ ಇಲ್ಲ. ಮರದಗೊಂಬೆ ಹಾಗೆ ಒಂದೇಕಡೆ ನೋಡುತ್ತ ಕೂತಿರ್ತಾನೆ. ಈಗಂತೂ ಇದು ಪೂರಾ ಉಲ್ಟಾನೆ ಆಗಿಹೋಯ್ತಲ್ಲ! ಅನಿಶ್ಚಿತತೆಗೆ ನಿದ್ದೆ ಹತ್ತಿರ ಸುಳಿಯುವಂತೆ ಕಾಣಲಿಲ್ಲ.

ಬೆಳಗಾಗುವುದಕ್ಕಿಲ್ಲ, ಈಶ್ವರ ತನಗೆ ಮಾವಿನಕುರ್ವೆಗೆ ಹೋಗಬೇಕು ಅಂತ ಗದ್ದಲ ಸುರುಮಾಡಿದ. ಚಹ ಕುಡಿಯುವುದರೊಳಗೆ ಮೂರೂ ತಂಗಿಯರಿಂದ ಒಂದರಮೇಲೊಂದು ಫೋನು ಬಂದು ಈಶ್ವರ ಅವರೊಂದಿಗೂ 'ನಂಗಿಲ್ಲಿ ಕಟ್‌ಹಾಕದಾಂಗಾಗ್ತದೆ. ಮಾವಿನಕುರ್ವೆಗೆ ಕರಕೊಂಡು ಹೋಗಿ...' ಅಂತ ಬೇಡಿಕೊಂಡ. 'ಮಾವಿನಕುರ್ವೇಲಿ ಎಂತಾ ಅದೆ ಈಗ ಅಂತಾ ಅರ್ಜೆಂಟು...' ಕರಕರೆಯಾಗಿ ಗಣೇಶ ಕೇಳಿದ್ದಕ್ಕೆ, 'ಯಂತಾ ಅದೆಯ! ನಮ್ಮ ಮಾವಿನಕುರ್ವೆ ಬೀಗ ದೇಶದಲ್ಲೆಲ್ಲ ಪ್ರಸಿದ್ಧ... ನಿಂಗ್ ಮಾತ್ರ ಗೊತ್ತಿಲ್ಲ. ಅಪ್ಪನ್ನ ಕೇಳ' ಅಂತ ದಬಾಯಿಸಿದ. 'ನೀವೇನೂ ಕರೆದುಕೊಂಡು ಹೋಗುವುದು ಬೇಡ. ಪ್ರಾಯದಲ್ಲಿ ತಾನು ತಿರುಗಾಡಿದಷ್ಟು ಈಗಲು ನೀವು ತಿರುಗಾಡಿಲ್ಲ. ನಾನೊಬ್ಬನೆ ಹೋಗುತ್ತೇನೆ' ಅಂತ ಸಿದ್ಧತೆ ಮಾಡಲಾರಂಭಿಸಿದಾಗ ಇದು ಬಗೆಹರಿಯುವುದಲ್ಲ ಅಂತ ಕೇಶವ ಒಂದು ನಿರ್ಧಾರಕ್ಕೆ ಬರಲೇಬೇಕಾಯಿತು. ಮರುದಿನ ರಾತ್ರಿ ಸ್ಲೀಪರ್ ಬಸ್ಸಿನಲ್ಲಿ ಪಕ್ಕದಲ್ಲಿ ಮಲಗಿದ ಕೇಶವ, ನಿಂತೇ ಹೋದಂತಿದ್ದ ಚಕ್ರ ಇದ್ದಕ್ಕಿದ್ದಂತೆ ಭರ್ರ್ ಅಂತ ತಿರುಗತೊಡಗಬಹುದು ಅಂತ ಯಾರಿಗೆ ನಿರೀಕ್ಷೆಯಿತ್ತು ಅಂತ ವಿಸ್ಮಯಪಟ್ಟ. ಪಕ್ಕದಲ್ಲಿ ಈಶ್ವರ ಸಣ್ಣಕೆ ಗೊರೆಯುತ್ತಿದ್ದ. ಯಾವುದೂ ಮನುಷ್ಯರ ಕೈಯಲ್ಲಿಲ್ಲ ಅಂತ ನಿಟ್ಟುಸಿರು ಬಿಟ್ಟ. ಅತ್ತಿಗೆಗಿನ್ನೂ ಸಣ್ಣ ಪ್ರಾಯ. ಮದುವೆಯಾಗಿ ವರ್ಷವಷ್ಟೆ ಆಗಿತ್ತು. 'ಥೋ.. ಎಂತೆಲ್ಲ ಆಗೋಯ್ತು! ಮತ್ತೆ ನೆನಪು ವಾಪಸು ಬರೂದಿಲ್ಲಂತಾದ್ರೆ ಅವನ ಹೆಂಡತಿ ವ್ಯವಹಾರ ಕೈಗೆ ತಗೋಳಬೇಕು, ಅಷ್ಟೇ. ಕಾಯದೆ ಪ್ರಕಾರ ಅವಳೇ ವಾರಸುದಾರಳಾಯ್ತಲ್ಲ...' ಅಂಗಡಿ ಕಾಮತರು ಪಶ್ಚಾತ್ತಾಪದಲ್ಲಿ ಹೇಳಿದ್ದರು. ರಾತ್ರಿ ಚಂದ್ರು ಮೆತ್ತಿನಮೇಲೆ ಸಿಕ್ಕಾಗ ತಾನು ಈ ವಿಷಯ ತೆಗೆದು



ಶ್ಯಾಮಲ ಸುಶೀಲ ಕಾಂತಿ ಎಲ್ಲರನ್ನು ಕರೆದು, 'ಪಾಪ ಅತ್ತಿಗೆ... ಮುಂದೆ ಹ್ಯಾಗೆ ಪ್ರಾಯ ಕಳೀತಾಳೆಯೊ' ಅಂತ ಸಂತಾಪ ಸೂಚಿಸಿದ್ದಕ್ಕೆ ಶಾಮಲ, 'ಅಣ್ಣಗೆ ನೆನಪಷ್ಟೇ ಹೋಗದೆಯೋ, ಮಕ್ಕಳಾಗತದೆ ಎಲ್ಲಾ ಆಗತದೆ. ನೀನೊಬ್ಬ' ಅಂತ ಹೀಯಾಳಿಸಿದ್ದಳು. 'ಮಕ್ಳಾಗತದೆ. ಅವರ ಅಡೀಲಿ ನಾವೆಲ್ಲ ಸೇವೆ ಮಾಡಕಂಡಿರೂದು, ಅಲ್ಲವನೇ?' ಅಂತ ಹಣೆ ಗಂಟು ಹಾಕಿದ್ದಕ್ಕೆ, 'ಹಾಂಗೆ ನಿನ್ ಯೋಚ್‌ನೆ... ಅದಕ್ಕೇನು ಮಾಡೂದು ಅಂತ ನಿಂದು?' ಚಂದ್ರು ಸುಶೀಲ ಇಬ್ಬರಿಗೂ ಅರ್ಥವಾಗಿ ಗಂಭೀರರಾದರು. ಅತ್ತಿಗೆಗೆ ಬೇರೆ ಮದುವೆ ಮಾಡಿಸುವ ಸಲಹೆ ತಾನು ಕೊಟ್ಟು ದಿಗ್ಭ್ರಮೆಯಲ್ಲಿ ಅವರೆಲ್ಲ ಬೇಡವೇಬೇಡ ಅಂತ ತಿರಸ್ಕರಿಸಿ ಮೊದಮೊದಲು ಅಸಾಧ್ಯ ಅನ್ನಿಸಿದ್ದು ಕ್ರಮೇಣ ಮನಃಪೂರ್ವಕ ಪ್ರಯತ್ನಕ್ಕಿಳಿಯುವಂತಾಗಿತ್ತು. ಇದು ಗುಣವಾಗದ ಸಮಸ್ಯೆ ಅಂತ ಬೆಂಗಳೂರಿನ ಡಾಕ್ಟರು ಹೇಳಿದ್ದಾರೆಂದು ಶ್ಯಾಮಲ ಅತ್ತಿಗೆಗೆ ಹೇಳುವುದರಿಂದ ಸುರುವಾಗಿತ್ತು. ಬಹುಶಃ ಅದಕ್ಕೇ ಇರಬೇಕು,